Fax: 08282-256262
E-mail:kuvempuacademic@gmail.com

Phone No - 08282-256149
Website:www.kuvempu.ac.in

ಕುವೆಂಪು ವಿಶ್ವವಿದ್ಯಾಲಯ
ಶೈಕ್ಷಣಿಕ ವಿಭಾಗ, ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

**Re-Accredited by NAAC with "A" Grade, Ranked 73rd place in NIRF-2019 & 45th Place at National Level in SCIMAGO world Rankings**

ಸಂಖ್ಯೆ:ಕುವಿ:ಎಸಿ–5: 2367 :2019–20

ದಿನಾಂಕ:27–06–2019

## ಸುತ್ತೋಲೆ

ವಿಷಯ: ವಿಶ್ವವಿದ್ಯಾಲಯದ ವಿವಿಧ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶ ನೀಡುವ ಅರ್ಹತೆಯ ನಿಯಮಗಳನ್ನು ಅನುಸರಿಸುವ ಕುರಿತು.

ಉಲ್ಲೇಖ:
1. ಅಧಿಸೂಚನೆ ಸಂಖ್ಯೆ:ಕುವಿ:ಎಸಿ–1:ಬಿ.ಸಿ.ಎ.(9)/2407/2005–06, ದಿನಾಂಕ:01–08–2005.
2. ಸುತ್ತೋಲೆ ಸಂಖ್ಯೆ:ಕುವಿ:ಎಸಿ–1/2516/2010–11, ದಿನಾಂಕ:04–08–2010.
3. ಅಧಿಸೂಚನೆ ಸಂಖ್ಯೆ:ಕುವಿ:ಶೈವಿ–1:825/2011–12, ದಿನಾಂಕ:28–07–2011.
4. ಸುತ್ತೋಲೆ ಸಂಖ್ಯೆ:ಕುವಿ:ಎಸಿ–5/572/2019–20, ದಿನಾಂಕ:03–05–2019.

–*****–

ವಿಶ್ವವಿದ್ಯಾಲಯದ ಸಂಯೋಜಿತ ಹಾಗೂ ಘಟಕ ಕಾಲೇಜುಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ವರ್ಷದ ಸ್ನಾತಕ ಪದವಿಯ ಪ್ರವೇಶಕ್ಕೆ ಸಂಬಂಧಪಟ್ಟಂತೆ ಹಿಂದಿನ ಹಲವು ಸುತ್ತೋಲೆ ಮತ್ತು ಆದೇಶಗಳಲ್ಲಿ ಪ್ರವೇಶಾರ್ಹತೆಯ ನಿಯಮಗಳನ್ನು ಕಾಲೇಜುಗಳಿಗೆ ಒದಗಿಸಲಾಗಿದೆ. ಆದಾಗ್ಯೂ, ಕೆಲವು ಕಾಲೇಜುಗಳ ಪ್ರಾರ್ಚಾಯರು ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡದೆ ವಿಶ್ವವಿದ್ಯಾಲಯದ ಅನುಮತಿಗಾಗಿ ಕಳುಹಿಸುತ್ತಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಅನಗತ್ಯ ಆರ್ಥಿಕ ತೊಂದರೆ, ವಿಳಂಬ ಹಾಗೂ ವಿಶ್ವವಿದ್ಯಾಲಯದ ಕಛೇರಿಗೆ ಅನಗತ್ಯ ಕಾರ್ಯದೊತ್ತಡ ಉಂಟಾಗಿರುತ್ತದೆ. ಆದ್ದರಿಂದ, ವಿಶ್ವವಿದ್ಯಾಲಯ ಹೊರಡಿಸಿರುವ ಉಲ್ಲೇಖಿತ ಅಧಿಸೂಚನೆ, ಸುತ್ತೋಲೆಗಳು ಮತ್ತು ಸಂಬಂಧಪಟ್ಟ ಕೋರ್ಸ್‌ನ ರೆಗ್ಯುಲೇಷನ್ ಗಮನಿಸಿ ಅದರಂತೆ ಕ್ರಮಕೈಗೊಳ್ಳಬೇಕಾಗಿದೆ. ಮುಂದುವರಿದು, ಕಾಲೇಜುಗಳಿಂದ ಆಗಾಗ್ಗೆ ಬರುವ ಕೋರಿಕೆಗಳಿಗೆ ಸಂಬಂಧಪಟ್ಟಂತೆ ಈ ಕೆಳಗಿನ ಸ್ಪಷ್ಟೀಕರಣಗಳನ್ನು ನೀಡಲಾಗಿದೆ.

01) ಸ್ನಾತಕ ಪದವಿಯ 3ನೇ ಹಾಗೂ 5ನೇ ಸೆಮಿಸ್ಟರ್ ಪ್ರವೇಶಕ್ಕೆ ಅರ್ಹತೆ ಪಡೆಯಲು ಹಿಂದಿನ ಪರೀಕ್ಷೆಯ ಶೇ.40 ರಷ್ಟು ವಿಷಯಗಳಲ್ಲಿ ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ. ಶೇ 40ನ್ನು ಲೆಕ್ಕಹಾಕುವಾಗ ಸಂಬಂಧಪಟ್ಟ ಕೋರ್ಸ್‌ನ ಹಿಂದಿನ ಎಲ್ಲಾ ಸೆಮಿಸ್ಟರ್‌ಗಳ ಒಟ್ಟಾರೆ ವಿಷಯಗಳಲ್ಲಿ ಉತ್ತೀರ್ಣರಾಗಿರುವುದನ್ನು ಆಧರಿಸಿ ಲೆಕ್ಕ ಹಾಕಿದಾಗ ಬಂದ ಉಪಲಬ್ದದಲ್ಲಿ ಅಪೂರ್ಣ ಅಂಶವನ್ನು (Fraction) ಹೊರತುಪಡಿಸಿ, ಉಳಿದ ಉಪಲಬ್ದ ಅಂಶವನ್ನು ಮಾತ್ರ ಪರಿಗಣಿಸುವಂತೆ ತಿಳಿಸಿ ಉಲ್ಲೇಖ–(1)ರ ಹೊರಡಿಸಿರುವ ಅಧಿಸೂಚನೆ ಚಾಲ್ತಿಯಲ್ಲಿರುತ್ತದೆ (ಉದಾಹರಣೆ: 5.6 ಬಂದಲ್ಲಿ 5 ವಿಷಯ ಮಾತ್ರ ಪರಿಗಣಿಸುವುದು, 4.8 ಬಂದಲ್ಲಿ 4 ವಿಷಯ ಮಾತ್ರ ಪರಿಗಣಿಸುವುದು, ಇತ್ಯಾದಿ).

02) ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ಒಟ್ಟಾರೆ ಶೇ.40 ರಷ್ಟು ವಿಷಯಗಳಲ್ಲಿ "ಪರಿಸರ ವಿಜ್ಞಾನ" ಮತ್ತು "ಭಾರತ ಸಂವಿಧಾನ" ವಿಷಯಗಳನ್ನು ಪರಿಗಣಿಸುವಂತೆ ಉಲ್ಲೇಖ (2)ರ ಸುತ್ತೋಲೆಯನ್ನು ತಿಳಿಸಲಾಗಿದ್ದು, ಇದರಲ್ಲಿ ಬದಲಾವಣೆ ಇರುವುದಿಲ್ಲ.

ಮು. ತಿ. ನೋ.

03) ಸ್ನಾತಕ ಪ್ರಥಮ ವರ್ಷದ ಪದವಿ ಪ್ರವೇಶಕ್ಕೆ ಪಿ.ಯು.ಸಿ. ಅಥವಾ 10+2 ಗೆ ಸಮಾನವಾದ ವಿದ್ಯಾರ್ಹತೆ ಹೊಂದಿರುವ ವಿದ್ಯಾರ್ಥಿಗಳ ಜೊತೆಗೆ ಎಸ್.ಎಸ್.ಎಲ್.ಸಿ. ನಂತರದ **ಎರಡು ವರ್ಷಗಳ** ಜೆ.ಓ.ಸಿ. ಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಹಾಗೂ ಎಸ್.ಎಸ್.ಎಲ್.ಸಿ. ನಂತರ ಸರ್ಕಾರದಿಂದ ಮಾನ್ಯತೆ ಪಡೆದ **ಎರಡು ವರ್ಷಗಳ** ಐ.ಟಿ.ಐ. ನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡಲು ಉಲ್ಲೇಖ (3)ರಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ಅದನ್ನು ಅನುಸರಿಸುವುದು.

04) ಸ್ನಾತಕ ಪದವಿಯ ವಿನಿಯಮದಲ್ಲಿ ಡಿಪ್ಲೋಮಾ ಕೋರ್ಸ್ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪದವಿ ತರಗತಿಗಳಿಗೆ ಪ್ರವೇಶಾತಿ ನೀಡುವ ಬಗ್ಗೆ ಉಲ್ಲೇಖ–04ರ ಸುತ್ತೋಲೆಯನ್ನು ಮಾಹಿತಿಗಳನ್ನು ಒದಗಿಸಲಾಗಿದ್ದು, ಅದರಂತೆ ಪ್ರವೇಶ ನೀಡಲು ಕ್ರಮ ಕೈಗೊಳ್ಳುವುದು.

ಮೇಲ್ಕಂಡ ನಿಯಮಗಳನ್ವಯ ಪ್ರಾಂಶುಪಾಲರ ಹಂತದಲ್ಲೇ ಪರಿಶೀಲಿಸಿ ಅರ್ಹ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲು ಕ್ರಮ ಕೈಗೊಳ್ಳುವುದು. ಇನ್ನು ಮುಂದೆ ಇಂತಹ ಪ್ರಕರಣಗಳಿಗೆ ವಿಶ್ವವಿದ್ಯಾಲಯದಿಂದ ಅನುಮತಿ ಪತ್ರಗಳನ್ನು ನೀಡುವುದಿಲ್ಲವೆಂದು ಸ್ಪಷ್ಟಪಡಿಸಿದೆ.

ಕರಡು ಕುಲಸಚಿವರಿಂದ
ಅನುಮೋದಿಸಿದೆ

ಉಪಕುಲಸಚಿವ
ಉಪ ಕುಲಸಚಿವ
ಶೈಕ್ಷಣಿಕ ವಿಭಾಗ,
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577451
ಶಿವಮೊಗ್ಗ ಜಿಲ್ಲೆ.

ಗೆ,

ಪ್ರಾಂಶುಪಾಲರು, ಶಿವಮೊಗ್ಗ : ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸಂಯೋಜಿತ : ನೇರ : ಘಟಕ ಪದವಿ ಕಾಲೇಜುಗಳು.

ಪ್ರತಿಗಳು:

1. ಕುಲಸಚಿವರು (ಮೌಲ್ಯಮಾಪನ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ
2. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ
3. ಪರೀಕ್ಷಾ ವಿಭಾಗ ಹಾಗೂ ಶೈಕ್ಷಣಿಕ ವಿಭಾಗದ ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು ಮತ್ತು ಅಧೀಕ್ಷಕರಿಗೆ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ
4. ಕಛೇರಿ ಪ್ರತಿ.